**2 ಅಧ್ಯಕ್ಷರು ಅಪ್ಪಣೆ ಮೇರೆಗೆ ಪ್ರಸ್ತಾಪಿಸಿಸಲಾದ ವಿಷಯಗಳು**

(ಅ) ವಿಷಯ: ಅಂಗನವಾಡಿ ಕಾರ್ಯಕರ್ತರ ಆಯ್ಕೆಗೆ ಶಾಸಕರ ಅಧ್ಯಕ್ಷತೆಯಲ್ಲಿದ್ದ ಸಮಿತಿಗಳನ್ನು ವಿತ್‌ಡ್ರಾ ಮಾಡಿರುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನ ಹಳ್ಳಿ): ಮಾನ್ಯ ಅಧ್ಯಕ್ಷರೆ, ಅಂಗನವಾಡಿ ಆಯ್ಕೆಗೆ ಶಾಸಕರ ಅಧ್ಯಕ್ಷತೆಯಲ್ಲಿ ಏನು ಸಮಿತಿ ಇತ್ತು, ಅದನ್ನು 1ನೇ ತಾರೀಖಿನಿಂದ withdraw ಮಾಡಿದ್ದಾರೆಂದು ನಮಗೆ ಮಾಹಿತಿ ಕೊಟ್ಟಿದ್ದಾರೆ. ನಮ್ಮ ಕಡೆಯಲ್ಲಿ ಅಂಗನವಾಡಿ ಆಯ್ಕೆ ಆಗಬೇಕಾಗಿದೆ. ಆ ಆಯ್ಕೆ ಸಮಿತಿಯಲ್ಲಿ D.S. ಅನ್ನು ತಂದು ಕೂರಿಸುವುದು, MLA ಗಳನ್ನು member ಮಾಡುವುದು ಬೇಡವೆಂದು ಇಲ್ಲಿ ಚರ್ಚೆ ಮಾಡಿ, ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಆಗಬೇಕೆಂದು ಏನಿತ್ತು, ಅದನ್ನು ದಯಮಾಡಿ continue ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡಿತ್ತಿದ್ದೇನೆ. ಅದರ ಜೊತೆಗೆ ನಾನು ಇಲ್ಲಿ ಒಂದು ದಿವಸ ಮಾತನಾಡುತ್ತಿದ್ದಾಗ ಹೇಳೀದ್ದೆ. Hostel selection ಗೆ ಕೂಡ MLA ಗಳ ಅಧ್ಯಕ್ಷತೆಯಲ್ಲಿ ಸಮಿತಿ ಮಾಡುತ್ತೇವೆಂದು ಒಪ್ಪಿದರು. ಆದರೆ, ಸರ್ಕಾರ ಅದ್ಯಾವುದನ್ನು ಮಾಡಲಿಲ್ಲ. ಪ್ರತಿ ಸಲ ನಾವು ಇಲ್ಲಿ raise ಮಾಡುವುದು, ವಾಪಸ್ಸು ಹೋಗುವುದು ಆಗುತ್ತಿದೆ. ಮೂರನೆಯದಾಗಿ, ಹೊರಟ್ಟಿಯವರೆ, ಸರ್ವಶಿಕ್ಷಣ ಅಭಿಯಾನ ಬಂದಮೇಲೆ SDMC ಗಳು ಏನು ರಚನೆ ಆದವು, ಊರಿನಲ್ಲಿ ಬಹಳ ಪ್ರಮುಖರನ್ನು School ಗೆ ಏನಾದರೂ ಸೇವೆ ಮಾಡುವವರನ್ನು, ಎಲ್ಲಾ ಕಾರ್ಯಕ್ರಮ ಮಾಡುವವರನ್ನು ನಾವು ಸದಸ್ಯರನ್ನಾಗಿ ಮಾಡುವುದಕ್ಕೆ ಆಗುತ್ತಿಲ್ಲ. parents ಅಲ್ಲ ಎನ್ನುವ ಒಂದು ಕಾರಣಕ್ಕಾಗಿ ಅವರನ್ನು ಆಚೆ ಇಡುತ್ತಿದ್ದೀರಿ. ಹಾಗಾಗಿ ಶಾಲೆಯಲ್ಲಿ ನಿಜವಾಗಿ ಯಾರು ಆಸಕ್ತಿ ತೆಗೆದುಕೊಳ್ಳುತ್ತಿದ್ದಾರೋ ಆ ರೀತಿ ಆಸಕ್ತಿ ತೆಗೆದುಕೊಳ್ಳುವಂಥ ಕ್ರಿಯೆ ಉಂಟಾಗುತ್ತಿಲ್ಲ. ಯಾರೂ parent ಬರುತ್ತಿಲ್ಲ, meeting ಗಳಿಗೆ attend ಮಾಡುವುದಿಲ್ಲ. ದಯಮಾಡಿ, ಅದಕ್ಕೋಸ್ಕರ ಅಲ್ಲಿ ಯಾರಾದರೂ ಸಮಾಜದ ಕೆಲಸ ಮಾಡುವಂಥವರನ್ನು ಗಾಮದ ಯಾರಾದರೂ ಪ್ರಮುಖರನ್ನು ನಮ್ಮ ಸುಧಾರಣ ಸಮಿತಿಗಳಿಗೆ ಹಾಕಲಿಕ್ಕೆ ಶಾಸಕರಿಗೆ ಸ್ವಲ್ಪ ಅವಕಾಶ ಮಾಡಿಕೊಡುವುದು ವಾಸ್ತವವೆಂದು ನಾನು ತಿಳಿದುಕೊಂಡಿದ್ದೇನೆ. ಈಗ ಕೇವಲ parents ಎಂದರೆ ಅವರಿಗೆ ಆಸಕ್ತಿ ಇರುವುದಿಲ್ಲ. ದಯಮಾಡಿ, ಮುಖ್ಯವಾಗಿರುವವರನ್ನು ಯಾರು ಪ್ರಮುಖರಿದ್ದಾರೆ, ಅವರನ್ನು ಅಲ್ಲಿ ಹಾಕುವುದಕ್ಕೆ ಮಾಮೂಲಿನಂತೆ ತಾವು ಅವಕಾಶ ಮಾಡಬೇಕು. ಕುಮಾರಸ್ವಾಮಿಯವರೇ, ಶಾಸಕರ ಅಧ್ಯಕ್ಷತೆಯಲ್ಲಿ ಏನು

ಸಮಿತಿ ಇತ್ತು ಅದನ್ನು ಮುಂದುವರಿಸಲೇಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಹಿಂದೆ stay ತಂದು ಆಯ್ಕೆಯಾಗುವುದನ್ನು ನಿಲ್ಲಿಸಿದರು. ಈಗ ನಮ್ಮ ಕಡೆಯೆಲ್ಲ ಆಯ್ಕೆಯಾಗಲಿಲ್ಲ. DDM chairman ಮಾಡಿ ನಾವು member ಆಗಿ ಹೋಗಿ ಕುಳಿತುಕೊಳ್ಳಲಿಕ್ಕಾಗುವುದಿಲ್ಲ. ದಯವಿಟ್ಟು ಅದನ್ನು ಬದಲಾವಣೆ ಮಾಡಿ. ಶಾಸಕರ ಅಧ್ಯಕ್ಷತೆಯಲ್ಲಿ ಈ ಸಮಿತಿ ಇರಬೇಕು.

ಶ್ರೀ ಎಂ.ಪಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು: ಈಗ ಚರ್ಚೆ ಬೇಡ. ಈಗ ಅವರು ಉತ್ತರ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಉಪಕಾರ್ಯದರ್ಶಿಯನ್ನು ಅಧ್ಯಕ್ಷರನ್ನಾಗಿ ಮಾಡಿ ಶಾಸಕರನ್ನು ಕಮಿಟಿ ಸದಸ್ಯರನ್ನಾಗಿ ಮಾಡುವುದು ಮಂತ್ರಿಗಳಾದ ಮಾನ್ಯ ಕುಮಾರಸ್ವಾಮಿಯವರೆ, ಇದು ಸರಿಯಾದ ಕ್ರಮವಲ್ಲ. ಅಂಗನವಾಡಿ ಬಗ್ಗೆ ನೀವು ಸ್ಪಷ್ಟವಾಗಿ ಹೇಳಬೇಕು. ಇಡೀ ಶಾಸಕರುಗಳಿಗೆ ಪಕ್ಷಾತೀತವಾಗಿ ಶಾಸಕರನ್ನು ಒಂದು ಆದ ಮೇಲೆ ಎಲ್ಲ ತೆಗೆಯುತ್ತಿದ್ದೀರಿ. ಅವರ ಕ್ಷೇತ್ರದಲ್ಲಿ ಶಾಸಕರೇನು ಮಾಡಬೇಕು? ಅವರಿಗೇನೂ ಗೌರವ ಬೇಡವೇ? ಶಾಸಕರು ಉಳಿಯಬೇಕೋ? ಬೇಡವೋ? ಯಾರೋ ಅಧಿಕಾರಿಗಳು, ಯಾರೋ ತಾಲ್ಲೂಕು ಪಂಚಾಯಿತಿ ಸದಸ್ಯರು ಅವರ ಕೈಕೆಳಗೆ ಇವರು ಸದಸ್ಯರಾಗಿರತಕ್ಕಂಥದ್ದು ಸರಿಯಾದ ಕ್ರಮವಲ್ಲ.

ಶ್ರೀ ಎಂ.ಪಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು: ಈಗ ಚರ್ಚೆಯಿಲ್ಲ ಕುಳಿತುಕೊಳ್ಳಿ. ಚರ್ಚೆ ಮಾಡುವುದಕ್ಕೆ ಪ್ರಾರಂಭ ಮಾಡಿಬಿಟ್ಟರೆ ಹೇಗೆ? ಅವರು ಹೇಳುತ್ತಾರೆ. ಕುಳಿತುಕೊಳ್ಳಿ.

ಶ್ರೀ ಎಂ.ಪಿ.ಕುಮಾರಸ್ವಾಮಿ: ಬಿಸಿಯೂಟದ ಆಯ್ಕೆ ಸಮಸ್ಯೆ.

ಅಧ್ಯಕ್ಷರು: ಕುಮಾರಸ್ವಾಮಿಯವರೆ, ಶೂನ್ಯ ವೇಳೆಯಲ್ಲಿ ಚರ್ಚೆಗೆ ಅವಕಾಶವಿಲ್ಲ.

ಶ್ರೀ ಎಂ.ಪಿ.ಕುಮಾರಸ್ವಾಮಿ: ಸ್ತ್ರೀಶಕ್ತಿಯವರಿಗೆ ಕೊಟ್ಟಿದ್ದೀರಿ. ಅಲ್ಲಿ ಒಬ್ಬರನ್ನು ಕಂಡರೆ ಒಬ್ಬರಿಗೆ ಆಗುವುದಿಲ್ಲ. ಬಿಸಿಯೂಟದ ಅಡುಗೆಯವರನ್ನು ಆಯ್ಕೆ ಮಾಡುವುದಕ್ಕೆ ಯಾರಿಗೆ ಕೊಟ್ಟಿದ್ದಾರೋ ಗೊತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಭಾರೀ ಸಮಸ್ಯೆಯಾಗಿದೆ. ಶಾಸಕರು entry ಆಗುವ ಹಾಗಿಲ್ಲ. ನಾಳೆಯೋ,

ಇವತ್ತೋ ಮುಖ್ಯಮಂತ್ರಿಗಳ ಹತ್ತಿರಕ್ಕೆ ನಮ್ಮ ಕ್ಷೇತ್ರದ ಒಂದು ಕೇಸ್ ಬರುತ್ತದೆ. ದಯಮಾಡಿ, ಈ ಬಗ್ಗೆ ಸಚಿವರು ಉತ್ತರ ಕೊಡಬೇಕು.

ಶ್ರೀ ಬಸವರಾಜ ಎಸ್.ಹೊರಟ್ಟಿ: ನಾನು ಅವರ ಉತ್ತರ ಹೇಳುವುದಿಲ್ಲ. ಮಾಧುಸ್ವಾಮಿಯವರು ಹೇಳಿದಂತೆ, ಇವತ್ತೇನು ಶಾಲ ಅಭಿವೃದ್ಧಿ ಸಮಿತಿಗಳಿವೆ, ಇವತ್ತು ಶಾಲೆಯಲ್ಲಿ ಓದುತ್ತಿರುವ ಮಕ್ಕಳ ತಂದೆ–ತಾಯಿಗಳಿರಬೇಕೆನ್ನುವಂಥದ್ದು ಕೇಂದ್ರ ಸರ್ಕಾರದ ಸರ್ವಶಿಕ್ಷಣ ಅಭಿಯಾನದಲ್ಲಿ ಬಂದ ನಿಯಮ. ಆದರೀಗ ಕಾರಣಾಂತರಗಳಿಂದ ಅಲ್ಲಿರುವ defect ಗಳು ಮತ್ತು ಅಲ್ಲಿ ಕೆಲವರು ಹೆಬ್ಬೆಟ್ಟು ಒತ್ತುವವರಿರುತ್ತಾರೆ, ಕೆಲವರು ಬರುವ ಹಾಗಿಲ್ಲ, ಹೀಗಾಗಿ ಮೊನ್ನೆ ವಾಟಾಳ್ ನಾಗರಾಜ್‌ರವರು ಒಂದು ವಿಷಯ ಹೇಳಿದರು. ದಾನ ಕೊಟ್ಟವರ ಸೇವೆಯನ್ನು ಪರಿಗಣಿಸಿ ಅವರನ್ನು ಸೇರಿಸುವುದಕ್ಕೆ ಕ್ರಮ ತೆಗೆದುಕೊಳ್ಳೋಣ. ಅದೇ ರೀತಿ ಮಾಧುಸ್ವಾಮಿಯವರು ಹೇಳಿದ್ದು ನನಗೆ ಅನೇಕ ಸಾರಿ ಸೂಕ್ತವೆಂದು ಅನಸುತ್ತದೆ. ಇದರ ಬಗ್ಗೆ ಚರ್ಚೆಯೂ ಮಾಡಿದ್ದೇವೆ. ಈ ದೃಷ್ಟಿಯಿಂದ ಅದನ್ನು ಕಾನೂನು ಚೌಕಟ್ಟಿನಲ್ಲಿ ಅಕಸ್ಮಾತ್ ಹಾಗೇನಾದರೂ ಮಾಡಲಿಕ್ಕೆ ಬರುವುದಾದರೇ, ನಾನು ನೋಡಿ, ಕಾನೂನು ಏನಿದೆ ಎಂದು ತರಿಸಿ ನೋಡುತ್ತೇನೆ. ಇದು ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆ. ಆ ಯೋಜನೆಯಲ್ಲಿ ಇದನ್ನೇನಾದರೂ ಮಾಡಲಿಕಾಗುತ್ತದೆಯೇ ಎಂದು ನೋಡುತ್ತೇನೆ. ನೋಡಿ, ಖಂಡಿತವಾಗಿ ನಾನು ಪರಿಶೀಲಿಸುತ್ತೇನೆ.

(ಆ) ಬೆಂಗಳೂರಿನ ಅತ್ತಿಗುಪ್ಪೆ ಶಾಲೆಯ ಕನ್ನಡ ಶಿಕ್ಷಕರನ್ನು ರಿಲೀವ್ ಮಾಡುವ ಬಗ್ಗೆ

ಶ್ರೀ ವಿ.ಸೋಮಣ್ಣ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿರುವ ಅತ್ತಿಗುಪ್ಪೆ ಶಾಲೆಯಲ್ಲಿನ ಕನ್ನಡ ಮಾಸ್ಟರ್ ಬಗ್ಗೆ ಪ್ರಸ್ತಾಪ ಮಾಡಿದಾಗ ಸಂಜೆ 5.30 ಗಂಟೆಯೊಳಗೆ ಆ ಮಾಸ್ಟರ್‌ನ್ನು ರಿಲೀವ್ ಮಾಡುತ್ತೇನೆಂದು ಮಾನ್ಯ ಸಚಿವರು ಭರವಸೆ ಕೊಟ್ಟು ಇವತ್ತಿಗೆ 5 ದಿವಸ ಆಯಿತು. ಆದರೆ, ಇದುವರೆಗೂ ಕೂಡ ಮಾಡಿಲ್ಲ. ಶಾಲೆಯಲ್ಲಿ ಕನ್ನಡ ವಿಷಯಕ್ಕೆ ಮಾಸ್ಟರ್ ಇಲ್ಲ.

ಶ್ರೀ ಎನ್. ಧರ್ಮಸಿಂಗ್: ಇವೆಲ್ಲವನ್ನು ಹೌಸ್‌ನಲ್ಲಿ ಎಷ್ಟು ಸಾರಿ ಕೇಳಬೇಕು?